**ದಿನಾಂಕಃ 02.05.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಸಿ ಎ., ಪ್ರತಿವಾದಿ ಪರ ವಕೀಲರಿಂದ**

**6.** ಟಿಪ್ಪಣಿಯಲ್ಲಿ ಒಂದು ಸರ್ವೆ ನಂಬರ್ ನ ಗಡಿಗಳು ನಮೂದು ಇರುತ್ತವೆ. ಮೂಲ ಟಿಪ್ಪಣಿ ಹಾಗೂ ಡಿಟೇಲ್ಸ್ ಟಿಪ್ಪಣಿ 2 ಒಂದೇ ಆಗಿರುತ್ತವೆ. ಮೂಲ ಟಿಪ್ಪಣಿ ಶೀಥಿಲವಾಗಿದ್ದರೆ ಹೊಸದಾಗಿ ಅಳತೆ ಮಾಡಿ ಇನ್ನೊಂದು ಟಿಪ್ಪಣಿಯನ್ನು ತಯಾರಿಸಲಾಗುತ್ತದೆ. ಅಂತಹ ಟಿಪ್ಪಣಿಗೆ ತಿದ್ದುಪಡಿ ಟಿಪ್ಪಣಿ ಎಂದು ಕರೆಯುವುದಿಲ್ಲ. ಡಿಟೇಲ್ಸ್ ಸರ್ವೆ ಸಮಯದಲ್ಲಿ ಜಮೀನಿನ ಮಾಲೀಕರಿಗೆ ತಿಳುವಳಿಕೆ ನೀಡಿ ಹೊಸದಾಗಿ ಸರ್ವೆ ಮಾಡುತ್ತೇವೆ. ಟಿಪ್ಪಣಿಯಲ್ಲಿರುವ ಆಕಾರದಂತೆ ಜಮೀನು ಅಳತೆ ಮಾಡಿದರೆ ಅದರ ವಿಸ್ತೀರ್ಣ ಸರಿಯಾಗಿ ಸಿಗುತ್ತದೆ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಚೆಕ್ಕುಬಂದಿಯಂತೆ ಅಳತೆ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

**7.** ನಿಸಿ-4 ರ 3 ನೇ ಖಂಡಿಕೆಯಲ್ಲಿ ಜಮೀನುಗಳನ್ನು ಕರ್ನಾಟಕ ಲಾಂಡ್ ರೆವಿನ್ಯೂ ಆಕ್ಟ್ ಹಾಗೂ ಸರ್ವೆ ಮ್ಯಾನುಯಲ್ ಪ್ರಕಾರವಾಗಿ ಅಳತೆ ಮಾಡಬೇಕಾಗಿ ಸೂಚನಾವಳಿಗಳು ಇರುತ್ತದೆ ಎಂದರೆ ಸರಿ. ಸಾಕ್ಷಿಯೂ ಅದರಂತೆಯೇ ಅಳತೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವುದೇ ಜಮೀನನ್ನು ಅಳತೆ ಮಾಡುವಾಗ ಅಜಾಬಾಜು ಜಮೀನವರಿಗೆ ನೋಟಿಸು ನೀಡಬೇಕಾಗುತ್ತದೆ ಎಂದರೆ ಸಾಕ್ಷಿಯೂ ವ್ಯಾಜ್ಯದ ಜಮಿನುಗಳನ್ನು ಅಳತೆ ಮಾಡಬೇಕಾಗಿ ಜಂಟಿ ಸೂಚನಾವಳಿಯಲ್ಲಿ ನಮೂದು ಇದ್ದು ಅದರಂತೆ ಅಳತೆ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಕಾನೂನನ್ನು ಉಲ್ಲಂಘನೆ ಮಾಡಿ ಅಳತೆ ಕಾರ್ಯ ಪೂರೈಸಿರುತ್ತೇನೆಂದರೆ ಸರಿಯಲ್ಲ. ಕೇವಲ ಪಕ್ಷಕಾರರರಿಗೆ ಮಾತ್ರ ನೋಟಿಸು ನೀಡಬೇಕಾಗಿ ಜಂಟಿ ಸೂಚನಾವಳಿಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.

**8.** ಸರ್ವೆ ನಂ. 142 ರ ಜಮೀನನ್ನು ನಮ್ಮ ದಾಖಲೆಗಳ ಪ್ರಕಾರ 1964 ನೇ ಇಸವಿಯಲ್ಲಿ ಅಳತೆ ಮಾಡಲಾಗಿರುತ್ತದೆ. ಸಾಮಾನ್ಯವಾಗಿ ಟಿಪ್ಪಣಿ ಹಾಗೂ ಗ್ರಾಮ ನಕ್ಷೆಯನ್ನು ಒಂದೇ ಅವಧಿಯಲ್ಲಿ ತಯಾರಿಸಲಾಗುತ್ತದೆ ಎಂದರೆ ಸರಿ. ಸರ್ವೆ ನಂ. 142 ರ ಟಿಪ್ಪಣಿ ಹಾಗೂ ಗ್ರಾಮ ನಕ್ಷೆ ಒಂದೇ ಅವಧಿಯಲ್ಲಿಯೇ ತಯಾರಿಸಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯೂ ಟಿಪ್ಪಣಿಯನ್ನು 1964 ನೇ ಇಸವಿಯಲ್ಲಿ ಹಾಗೂ ಗ್ರಾಮ ನಕ್ಷೆಯನ್ನು 2002 ನೇ ಇಸವಿಯಲ್ಲಿ ತಯಾರಿಸಲಾಗಿದೆ ಎಂದು ನುಡಿಯುತ್ತಾರೆ.

**9.** ಅಳತೆ ಸಮಯದಲ್ಲಿ ಪಕ್ಷಕಾರರು ಹಾಗೂ ಅವರ ಕಡೆಯವರ ವಕೀಲರು ಹಾಜರು ಇದ್ದರು. ನಿಸಿ–3 ರ ಮಹಜರಿನಲ್ಲಿ ವಕೀಲರು ಹಾಜರು ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯೂ ಸಹಿ ಪಡೆದಿರುತ್ತೇನೆ ಅವರ ಹೆಸರನ್ನು ಮಹಜರಿನಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಜಮೀನಿನ ವಿಸ್ತೀರ್ಣವನ್ನು ಆ ಜಮೀನಿನ ಟಿಪ್ಪಣಿ, ಅಕಾರ್ ಬಂದ್ ಹಾಗೂ ಇತರೆ ಸರ್ವೇ ದಾಖಲೆಗಳಂತೆ ಅಳತೆ ಮಾಡಿ ನಮೂದಿಸಲಾಗುತ್ತದೆ ಎಂದರೆ ಸರಿ.

**10.** ಸರ್ವೇ ನಂ. 142 ರ ಒಟ್ಟು ವಿಸ್ತೀರ್ಣ 13 ಎಕರೆ 3 ಗುಂಟೆ ಇದ್ದು ಅದರ ಪೈಕಿ 23 ಗುಂಟೆ ಕರಾಬು ಜಮೀನು ಇದ್ದು, ಉಳಿದಿರುವ ಜಮೀನಿನ ವಿಸ್ತೀರ್ಣ 12 ಎಕರೆ 20 ಗುಂಟೆ ಎಂದು ನಿಡಿ–7 ಮತ್ತು 8 ರಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯೂ ಅಕಾರ್ ಬಂದ್ ನಂತೆ ತಾಳೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ–7 ಮತ್ತು 8 ರ ಪಹಣಿ ಪತ್ರಿಕೆಗಳು ಟಿಪ್ಪಣಿ ಪ್ರಕಾರವಾಗಿ ನಮೂದಾಗಿರುತ್ತವೆ ಎಂದರೆ ಸಾಕ್ಷಿಯೂ ಅದನ್ನು ಹೇಳಲು ಬರುವುದಿಲ್ಲ ತಪ್ಪು ಆಗಿರಬಹುದು ಎಂದು ನುಡಿಯುತ್ತಾರೆ.

**11.** ನಿಸಿ–10/ ಗ್ರಾಮ ನಕ್ಷೆ ಮತ್ತು 15/ಟಿಪ್ಪಣಿ ಯಲ್ಲಿ ಸರ್ವೇ ನಂ. 142 ರ ಜಮೀನಿನ ಆಕೃತಿ/ಶೇಪ್ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ.

**12.** ಅಜುಬಾಜು ದಾರರ ಜಮೀನುಗಳನ್ನು ಅಳತೆ ಮಾಡದೇ ಕೇವಲ ವ್ಯಾಜ್ಯದ ಜಮೀನನ್ನು ಅಳತೆ ಮಾಡಿದರೆ ಸರಿಯಾದ ಗಡಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅಜುಬಾಜು ದಾರರ ಜಮೀನುಗಳ ಗಡಿಯನ್ನು ಗುರುತಿಸದೇ ಒತ್ತುವರಿಯನ್ನು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 142 ರ ವಿಸ್ತೀರ್ಣದ ಬಗ್ಗೆ ಸರ್ಕಾರದ ದಾಖಲೆಗಳಲ್ಲಿ ತಪ್ಪಾಗಿರುವುದರಿಂದ ಅವುಗಳನ್ನು ಸರಿಪಡಿಸಿಕೊಳ್ಳದೇ ಅದರ ಗಡಿಯನ್ನು ಗುರುತಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಸಿ–15 ರ ಟಿಪ್ಪಣಿಯಂತೆ ನಿಡಿ–11 ಮತ್ತು 12 ರ ಮುಟೇಶನ್ ಆದೇಶವಾಗಿದ್ದು ಅದರಂತೆ ನಿಡಿ–7,8 ಮತ್ತು 14 ರ ಪಹಣಿ ಹಾಗೂ ಪಟ್ಟಾ ಪುಸ್ತಕವನ್ನು ಪ್ರತಿವಾದಿಗೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವಂತಹ ನಿಸಿ–13 ರ ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ.142 ರ ಒಟ್ಟು ವಿಸ್ತೀರ್ಣ 9 ಎಕರೆ 37 ಗುಂಟೆ ಎಂದು ನಮೂದು ಇದ್ದು ಅದರ ಪೈಕಿ 1 ಎಕರೆ 29 ಗುಂಟೆ ಕರಾಬು ಎಂದು ನಮೂದಿಸಲಾಗಿದ್ದು, ಉಳಿದಿರುವ ವಿಸ್ತೀರ್ಣ 8 ಎಕರೆ 8 ಗುಂಟೆ ಎಂದು ನಮೂದು ಇದ್ದು, ಅದು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯೂ ಹೊಸ ಪಹಣಿ ಮತ್ತು ಹಳೇ ಪಹಣಿಯಲ್ಲಿ ಟ್ವಿಸ್ಟ್ ಆಗಿರುತ್ತದೆ ಎಂದು ನುಡಿಯುತ್ತಾರೆ.

**13.** ಸರ್ವೇ ನಂ. 142 ರ ಅಳತೆಯನ್ನು ಸರಿಪಡಿಸುವ ಬಗ್ಗೆ ಮೈಸೂರು ಮೇಲ್ಮನವಿ ಪ್ರಾಧಿಕಾರ ಆದೇಶ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಪಾಲನೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ವಾದಿಗೆ ಅನುಕೂಲವಾಗುವಂತೆ ಸುಳ್ಳು ವರದಿಯನ್ನು ತಯಾರಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ನನ್ನ ವರದಿಯನ್ನು ನ್ಯಾಯಾಲಯವೂ ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**14.** ಭೌತಿಕವಾಗಿ ಜಮೀನನ್ನು ಅಳತೆ ಮಾಡಬೇಕಾಗಿ ನಿರ್ದೇಶನ ಇತ್ತು ಎಂದರೆ ಸರಿ. ಆದ್ದರಿಂದ ನಾನು ಚೈನ್ ಮೂಲಕ ಅಳತೆ ಮಾಡಬೇಕಾಗಿದ್ದು, ರೋವರ್ ಮಶಿನ್ ಮೂಲಕ ಅಳತೆ ಮಾಡಿರುವುದು ತಪ್ಪು ಎಂದರೆ ಸರಿಯಲ್ಲ. ಸಾಕ್ಷಿಯೂ ಕೇಂದ್ರ ಕಚೇರಿಯಿಂದ ಆ ಮಶಿನ್ ಮೂಲಕವೇ ಅಳತೆ ಮಾಡಬೇಕಾಗಿ ನಿರ್ದೇಶನ ಇರುತ್ತದೆ ಆದ್ದರಿಂದ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲದಿಂಕ್ಕಲೂ ಚೈನ್ ಸರ್ವೇ ಮಾಡಿದರೆ ಸರಿಯಾದ ಗಡಿ ಗುರುತಿಸಲು ಬರುತ್ತದೆ ಎಂದರೆ ಸರಿಯಲ್ಲ.

**15.** ನಿಸಿ–8 ರ ನಕ್ಷೆಯಲ್ಲಿ ಗಡಿಯನ್ನು ಗುರುತಿಸಿದ ಜಾಗದಲ್ಲಿ ಬಣ್ಣವನ್ನು ಉಪಯೋಗಿಸಿಲ್ಲ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಆದರೆ ಗಡಿಯನ್ನು ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಕ್ಕಪಕ್ಕದ ಜಮೀನುಗಳ ಬಾಂದುಕಲ್ಲುಗಳನ್ನು ಇಟ್ಟಿರುವ ಜಾಗವನ್ನು ಅಳತೆ ಮಾಡಿಕೊಂಡು ಅದರೊಂದಿಗೆ ಪ್ರಶ್ನಿತಾ ಸರ್ವೇ ನಂ. 142 ರ ಜಮೀನನ್ನು ಅಳತೆ ಮಾಡಿದರೆ ಸರಿಯಾದ ಗಡಿಯನ್ನು ಗುರುತಿಸಲು ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಮೂಲ ಬಾಂದುಕಲ್ಲುಗಳನ್ನು ಗುರುತಿಸದೇ ಹಾಗೂ ಅವುಗಳನ್ನು ಗಣನೆಗೆ ತೆದುಕೊಳ್ಳದೇ ಅಳತೆ ಮಾಡಿರುವುದರಿಂದ ನನ್ನ ವರದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ನನ್ನ ವರದಿಯಲ್ಲಿ ಮೂಲ ಬಾಂದುಕಲ್ಲುಗಳು ಇರುವುದನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯೂ ನಮೂದಿಸಿಯೇ ಅಳತೆ ಮಾಡಿರುತ್ತೇನೆಂದು ನುಡಿಯುತ್ತಾರೆ. ಸರ್ವೇ ನಂ. 137 ಮತ್ತು 150 ರ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯೂ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ನಾನು ಅಳತೆ ಮಾಡಿರುವುದು ಸರ್ವೇ ನಂ. 142 ರ ಜಮೀನನ್ನು ಎಂದು ನುಡಿಯುತ್ತಾರೆ. ನಿಡಿ–7 ಮತ್ತು 8 ರ ಪಹಣಿ ಪತ್ರಿಕೆಯಲ್ಲಿ ನಮೂದು ಇರುವ ವಿಸ್ತೀರ್ಣವನ್ನು ನಾನು ಗಣನೆಗೆ ತೆಗದುಕೊಳ್ಳದೇ ಕೇವಲ ನಿಸಿ–13 ರ ಪಹಣಿ ಪತ್ರಿಕೆಯನ್ನು ಗಣನೆಗೆ ತೆದುಕೊಂಡು ನನ್ನ ವರದಿಯನ್ನು ತಯಾರಿಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯೂ ನಿಡಿ–7 ಮತ್ತು 8 ರ ವಿಸ್ತೀರ್ಣ ತಪ್ಪು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ವರದಿಯಲ್ಲಿ ಸರ್ವೇ ನಂ. 142 ಜಮೀನಿನ ವಿಸ್ತೀರ್ಣವನ್ನು ಉದ್ದೇಶಪೂರಕವಾಗಿ ಕಡಿಮೆ ತೋರಿಸಿರುತ್ತೇನೆಂದರೆ ಸರಿಯಲ್ಲ.

**16.** ಗ್ರಾಮ ನಕ್ಷೆ ಹಾಗೂ ನಾನು ತಯಾರಿಸಿರುವ ನಕ್ಷೆಗಳನ್ನು ಟಿಪ್ಪಣಿಯೊಂದಿಗೆ ತಾಳೆ ಮಾಡಿ ನೋಡಿದಾಗ ಆಕೃತಿ/ಶೇಪ್ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.